**OS-44/2019**
**PW-1**

ಇಂದು ದಿ:**03-09-2021** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲು ಪ್ರತಿವಾದಿಯ ಪರ : ಶ್ರೀ ಕೆ.ಟಿ.ಪಿ ವಕೀಲರಿಂದ:**

ಈ ದಾವೆಯನ್ನು ನನ್ನ ಮಗನ ವಿರುದ್ಧ ಸಲ್ಲಿಸಿದ್ದೇನೆ. ಪ್ರತಿವಾದಿಯು ಸರಿಯಾಗಿ ಹಿಸ್ಸೆ ಮಾಡಿರುವುದಿಲ್ಲ ಎಂದು ದಾವಾ ಸಲ್ಲಿಸಿರ್ದ್ದೇನೆ. 2 ನೇ ವಾದಿ ನನ್ನ ಹೆಂಡತಿ ಆಗಬೇಕು. 3 ನೇ ವಾದಿ ನನ್ನ 2 ನೇ ಮಗ ಇರುತ್ತಾನೆ. 4 ನೇ ವಾದಿ ನನ್ನ 2 ನೇ ವಾದಿ ಇರುತ್ತಾಳೆ. 5 ನೇ ವಾದಿ ನನ್ನ ಮಗಳಾಗಬೇಕು. ನಾನು 2 ನೇ ವಾದಿಯನ್ನು 1978 ರಲ್ಲಿ ಮದುವೆಯಾಗಿದ್ದೇನೆ. 4 ನೇ ವಾದಿಯನ್ನು 1985 ರಲ್ಲಿ ಮದುವೆಯಾಗಿದ್ದೇನೆ. ನಾನು ಮತ್ತು ಉಳಿದ ವಾದಿಯರು ಒಂದೇ ಮನೆಯಲ್ಲಿ ವಾಸವಾಗಿದ್ದೇವೆ. 2 ನೇ ವಾದಿಗೆ 3 ನೇ ವಾದಿ ಮತ್ತು ಪ್ರತಿವಾದಿ ಇಬ್ಬರು ಮಕ್ಕಳು ಇರುತ್ತಾರೆ. 4 ನೇ ವಾದಿಗೆ 5 ನೇ ವಾದಿ ಒಬ್ಬಳೇ ಮಗಳು ಇರುತ್ತಾಳೆ. 3 ನೇ ವಾದಿ ಬುದ್ದಿ ಮಾಂದ್ಯ ಇರುತ್ತಾನೆ. ಆತನನ್ನು ನಾನೇ ನೋಡಿಕೊಳ್ಳುತ್ತೇನೆ. ಆತನ ಪರವಾಗಿ ಸಂಸರಕ್ಷಣದಾರರಾಗಿ ಯಾರನ್ನೂ ನೇಮಕ ಮಾಡಿರುವುದಿಲ್ಲ ಎಂದರೆ ಸಾಕ್ಷಿಯು ತಂದೆ ತಾಯಿ ಇರುವುದರಿಂದ ಆ ರೀತಿ ನೇಮಕ ಮಾಡಿರುವುದಿಲ್ಲ. 3 ನೇ ವಾದಿಗೆ ವಕೀಲರನ್ನು ನೇಮಕ ಮಾಡುವುದಾಗಲೀ ಅಥವಾ ಪ್ರಕರಣ ನಡೆಸುವುದಾಗಲೀ ಗೊತ್ತಿಲ್ಲ ಎಂದರೆ ಸರಿ. ನಾನು 3 ನೇ ವಾದಿಗೆ ಸಹಿ ಹಾಕುವಂತೆ ಹೇಳಿದ್ದರಿಂದ ಸಹಿ ಮಾಡಿದ್ದಾನೆ. ಆತನು ಹೆಬ್ಬಟ್ಟಿನ ಗುರುತನ್ನು ಹಾಕಿದ್ದಾನೆ. ನಮ್ಮ ಕುಟುಂಬದ ಯಜಮಾನಿಕೆಯನ್ನು 35 ವರ್ಷಗಳಿಂದ ನಾನೇ ಮಾಡುತ್ತಾ ಬಂದಿದ್ದೇನೆ. ಪ್ರತಿವಾದಿ ಮದುವೆಯಾಗುವುದಕ್ಕಿಂತ ಮೊದಲು ನಮ್ಮ ಜೊತೆಗೆ ಒಟ್ಟಿಗೆ ಚೆನ್ನಾಗಿದ್ದನು. ಪ್ರತಿವಾದಿಯ ಮದುವೆಯ ಮೊದಲು ನಮ್ಮ ಕುಟುಂಬದ ಎಲ್ಲಾ ವ್ಯವಹಾರಗಳನ್ನು ನಾನೇ ನೋಡಿಕೊಳ್ಳುತ್ತಿದ್ದು, ನನ್ನ ನಿರ್ಣಯವೇ ಅಂತಿಮವಾಗಿತ್ತು ಎನ್ನುವುದು ಸರಿ. 4 ನೇ ವಾದಿಯು ಮಾತಿನಲ್ಲಿ ಜೋರು ಇದ್ದಾರೆ ಎನ್ನುವುದು ಸರಿಯಲ್ಲ. 2 ನೇ ವಾದಿಯು ಮೃಧ ಸ್ವಭಾದವರು ಎನ್ನುವುದು ಸರಿಯಲ್ಲ. 5 ನೇ ವಾದಿಯ ಮದುವೆ 5 ವರ್ಷಗಳ ಹಿಂದೆ ಆಗಿದ್ದು ಆಕೆಗೆ ವಿವಾಹ ವಿಚ್ಛೇದನ ಆಗಿದೆ. 5 ನೇ ವಾದಿಯ ಮದುವೆ 2014 ರಲ್ಲಿ ಆಗಿತ್ತು. 5 ನೇ ವಾದಿಯು ಪ್ರೀತಿಸಿ ಮದುವೆಯಾಗಿದ್ದರು ಎಂದರೆ ಸರಿ. ಅವರ ಮದುವೆಗೆ ಯಾವುದೇ ಹಣ ಖರ್ಚು ಆಗಿರುವುದಿಲ್ಲ. 5 ನೇ ವಾದಿಯ ಮದುವೆಗಿಂತ ಮೊದಲು ಹಕ್ಕು ಬಿಟ್ಟು ಪತ್ರ ಮಾಡಿಸಿಕೊಂಡಿದ್ದೇನೆ ಎಂದರೆ ಸಾಕ್ಷಿ ಮದುವೆಯಾದ ನಂತರ ಮಾಡಿಸಿಕೊಂಡಿದ್ದೇನೆ. 5 ನೇ ವಾದಿಗೆ ದಾವಾ ಆಸ್ತಿಯಲ್ಲಿ ಹಕ್ಕು ಬೇಡ ಎಂದು ನನ್ನ ಪರವಾಗಿ ಹಕ್ಕು ಖುಲಾಸೆ ಪತ್ರ ಬರೆದುಕೊಟ್ಟಿದ್ದಾರೆ ಎಂದರೆ ಸರಿ. ದಾವಾ ಆಸ್ತಿಯ ಚಕ್ ಬಂದಿ ಹಕ್ಕು ಖುಲಾಸೆ ಪತ್ರದಲ್ಲಿ ಬರೆದಿರುವುದು ಸರಿಯಾಗಿರುತ್ತದೆ.

**ಮುಂದುವರೆದ ಪಾಟೀ ಸವಾಲಿಗೆ ವಕೀಲರು ಸಮಯ ಕೋರಿದ್ದಾರೆ.**

(ತೆರೆದ ನ್ಯಾ . ದಲ್ಲಿ ಸಾಕ್ಷಿ ಹೇಳಿಕೆಯಂತೆ ನನ್ನ ಉಕ್ತಲೇಖನಕ್ಕೆ  ಬೆರಳಚ್ಚು ಪಡಿಸಿದೆ).

ಓ ಹೇ ಕೆ ಸರಿ ಇದೆ.

ಸಹಿ/-
**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ, ಹರಿಹರ.**